| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 63 ] [ Total No. of Printed Pages : 24

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 15. 06. 2011 ] [ Date : 15. 06. 2011

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಪರಮಾವಧಿ ಅಂಕಗಳು : 125 ] [ Max. Marks : 125

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| ***Total Marks*** | | | | | | | | | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ಅಕ್ಷರಗಳ ಸಂಖ್ಯೆ

(ಎ) ಒಂಬತ್ತು (ಬಿ) ಹತ್ತು

(ಸಿ) ಇಪ್ಪತ್ತೈದು (ಡಿ) ಏಳು

*ಉತ್ತರ :* ____________________

2. ಮಹಾಶಯನಿಗೆ – ಈ ಪದದಲ್ಲಿರುವ ವಿಭಕ್ತಿಯ ಹೆಸರು

(ಎ) ಪ್ರಥಮಾ (ಬಿ) ಚತುರ್ಥಿ

(ಸಿ) ಷಷ್ಠಿ (ಡಿ) ತೃತಿಯಾ

*ಉತ್ತರ :* ____________________

3. ಬರಿಗನಸು – ಪದವು ಈ ಸಂಧಿಗೆ ಉದಾಹರಣೆಯಾಗಿದೆ :

(ಎ) ಲೋಪ (ಬಿ) ಆಗಮ

(ಸಿ) ಆದೇಶ (ಡಿ) ಗುಣ

*ಉತ್ತರ :* ______

4. ನೋಡನು – ಈ ಕ್ರಿಯಾಪದ ಈ ರೂಪದಲ್ಲಿದೆ :

(ಎ) ನಿಷೇಧಾರ್ಥಕ (ಬಿ) ಸಂಭವನಾರ್ಥಕ

(ಸಿ) ವಿಧ್ಯರ್ಥಕ (ಡಿ) ಆತ್ಮಾರ್ಥಕ

*ಉತ್ತರ :* ______

5. ಸಂಧ್ಯಾ – ಈ ಪದದ ತದ್ಭವ ರೂಪ

(ಎ) ಸಂದ್ಯಾ (ಬಿ) ಸಂಧಾ

(ಸಿ) ಸಂಜಾ (ಡಿ) ಸಂಜೆ

*ಉತ್ತರ :* ______

6. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬಳಸುವ ಲೇಖನ ಚಿಹ್ನೆ

(ಎ) ಆವರಣ (ಬಿ) ಉದ್ಧರಣ

(ಸಿ) ಭಾವಸೂಚಕ (ಡಿ) ಅರ್ಧವಿರಾಮ

*ಉತ್ತರ :* ______

7. ಸಿಂಚಿಸು – ಈ ಪದದ ಅರ್ಥ

(ಎ) ಗಮನಿಸು (ಬಿ) ಚುಮುಕಿಸು

(ಸಿ) ಹೀಯಾಳಿಸು (ಡಿ) ಗೌರವಿಸು

*ಉತ್ತರ :* ______

8. ಕುಲಗಿರಿ ಕೆಡೆವಂದದೆ – ಇಲ್ಲಿರುವ ಅಲಂಕಾರ

(ಎ) ಉತ್ಪ್ರೇಕ್ಷೆ (ಬಿ) ರೂಪಕ

(ಸಿ) ದೃಷ್ಟಾಂತ (ಡಿ) ಉಪಮಾ

ಉತ್ತರ : ______________________________

9. ಎಣ್ದೆಸೆ – ಈ ಪದದಲ್ಲಿರುವ ವ್ಯಾಕರಣಾಂಶ

(ಎ) ಪಡೆನುಡಿ (ಬಿ) ಸಂಧಿವಿಗ್ರಹ

(ಸಿ) ಸಮಾಸ (ಡಿ) ಜೋಡುನುಡಿ

ಉತ್ತರ : ______________________________

10. ಕಂದ ಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ

(ಎ) 32 (ಬಿ) 102

(ಸಿ) 64 (ಡಿ) 144

ಉತ್ತರ : ______________________________

11. ಉಪಮೇಯ – ಉಪಮಾನಗಳು ಅರ್ಥಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ, ಅದು

(ಎ) ದೃಷ್ಟಾಂತಾಲಂಕಾರ (ಬಿ) ಉಪಮಾಲಂಕಾರ

(ಸಿ) ಶಬ್ದಾಲಂಕಾರ (ಡಿ) ಶ್ಲೇಷಾಲಂಕಾರ

ಉತ್ತರ : ______________________________

12. ಏಸೊಂದು – ಈ ಪದದ ಗ್ರಾಂಥಿಕ ರೂಪ

(ಎ) ಎಸೊ ಒಂದು (ಬಿ) ಎಷ್ಟೋ

(ಸಿ) ಏನೋ ಒಂದು (ಡಿ) ಎಷ್ಟೊಂದು

ಉತ್ತರ : ______________________________

13. ಸೂಟ್ – ಈ ಪದದ ಹೊಸಗನ್ನಡ ರೂಪ

(ಎ) ಸುಳ್ಳು (ಬಿ) ಸರದಿ

(ಸಿ) ಸುಳಿ (ಡಿ) ಸುಳ್

*ಉತ್ತರ :* ______

14. ಅವನು – ಎಂಬುದು ಈ ನಾಮಪದಕ್ಕೆ ಉದಾಹರಣೆ :

(ಎ) ಸರ್ವನಾಮ (ಬಿ) ಅಂಕಿತನಾಮ

(ಸಿ) ರೂಢನಾಮ (ಡಿ) ಅನ್ವರ್ಥಕನಾಮ

*ಉತ್ತರ :* ______

15. ಸಾಗರ – ಈ ಪದದ ಗಣ

(ಎ) ತ – ಗಣ (ಬಿ) ರ – ಗಣ

(ಸಿ) ಭ – ಗಣ (ಡಿ) ಯ – ಗಣ

*ಉತ್ತರ :* ______

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಒಬ್ಬ ತಾಯಿಯ ಗಾನದ ................................................................ .

17. ನನಗೆ ನಿನಗೆ ಪ್ರಾಣ ಕೊಟ್ಟ ................................................................ ಕಣೋ.

18. ಅವರಲ್ಲಿ ಜ್ಞಾನ ಸಂಪತ್ತಿನ ಜತೆಗೆ ................................................................

19. ಭಾರತೀಯ ಭಾಷೆಗಳ ಕಾಂತಿಯಲಿ ತೋರುತಿಹಳು ................................................................

20. ಇದು ಲಾಕ್ಷಾಗೇಹದಾಹಕ್ಕಿದು ವಿಷಮ ................................................................ .

21. 'ಅ' ಪಟ್ಟಿಯಲ್ಲಿನ ಪದಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಆರಿಸಿ, ಹೊಂದಿಸಿ ಬರೆಯಿರಿ : 5 ∞ 1 = 5

| | ಅ | | ಬ |
|---|---|---|---|
| i) | ನುಡಿಗಟ್ಟು | ಅ) | ಕಾಡುಮೇಡು |
| ii) | ದ್ವಿರುಕ್ತಿ | ಆ) | ಪಡೆನುಡಿ |
| iii) | ಜೋಡುನುಡಿ | ಇ) | ಗ್ರಾಂಥಿಕ ರೂಪ |
| iv) | ಅನುಕರಣಾವ್ಯಯ | ಈ) | ಹಿಂಡುಹಿಂಡು |
| v) | ಅನ್ಯದೇಶಿಯ | ಉ) | ಕಂಗೆಡು |
| | | ಊ) | ಸರಸರ |
| | | ಋ) | ಮುನಷಿ |
| | | ೠ) | ಲೆಕ್ಕಿಗ |

*ಉತ್ತರ :* i) ______________________

ii) ______________________

iii) ______________________

iv) ______________________

v) ______________________

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಿರಿ : 10 ∞ 1 = 10

22. ಭಾಷಾ ಮಿಶ್ರಣದ ಬಗ್ಗೆ ನಯಸೇನನ ಅಭಿಪ್ರಾಯ ಏನು ?

______________________

______________________

23. ತಮ್ಮ ವ್ಯಾಸಂಗಕ್ಕಾಗಿ ಮಂಜಪ್ಪನವರು ಅವರ ಚಿಕ್ಕಪ್ಪನವರ ಸಹಾಯವನ್ನು ಬಯಸಲಿಲ್ಲ. ಏಕೆ ?

______________________

______________________

24. ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವವುಳ್ಳ ವ್ಯಕ್ತಿ ಯಾರು ?

______________________

______________________

25. ಪರ್ವತರಾಜನ ಮಗನ ಹೆಸರು ಏನು ?

---

---

26. ಮೊಲವು ತನ್ನ ಪ್ರತಿಬಿಂಬವನ್ನು ಕಂಡದ್ದು ಎಲ್ಲಿ ?

---

---

27. ಮಳೆಯ ಬಿಲ್ಲಿನಲಿ ಹಲವು ಬಣ್ಣಗಳು ನೆರೆದಿಹಂತೆ ತೋರುವವಳು ಯಾರು ?

---

---

28. ನೆಲಕೆ ಹಿತವು ಯಾರಿಂದ ?

---

---

29. ಕಿರಾತಾರ್ಜುನರ ಬಾಣಗಳಿಂದ ಘಾಸಿಗೊಂಡ ಪ್ರಾಣಿ ಯಾವುದು ?

---

---

30. ಅರ್ಜುನನು ಶಬರನಿಗೆ ಯಾರನ್ನು ತೋರಿಸುವಂತೆ ಹೇಳುತ್ತಾನೆ ?

---

---

31. ದುರ್ಯೋಧನ ಮೂರನೇ ಏಟನ್ನು ಭೀಮನಿಗೆ ಯಾವ ಕಾರಣಕ್ಕಾಗಿ ಹೊಡೆದನು ?

---

---

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ಚಲನವಲನ, ಆಹಾರ ವಿಚಾರಗಳ ವಿಚಾರದಲ್ಲಿ ಪ್ರಾಣಿಗಳಿಗೂ, ಮನುಷ್ಯನಿಗೂ ಇರುವ ವ್ಯತ್ಯಾಸಗಳು ಏನು ?

33. ನಗೆಯ ಸಂದರ್ಭಗಳನ್ನು ಕುರಿತು ಬರೆಯಿರಿ.

34. ತಿಪ್ಪೇನಹಳ್ಳಿ ಪಾಠಶಾಲೆಯ ಸೂಚನಾ ಫಲಕದಲ್ಲಿ ಬರೆದ ಸೂಚನೆಗಳಾವುವು ?

35. ರಂಗಣ್ಣ ಮೇಷ್ಟ್ರು ಅನುಭವಿಸಿದ ಅವಮಾನದ ಪ್ರಸಂಗವನ್ನು ಕುರಿತು ಬರೆಯಿರಿ.

36. ಅಂದಿನ ಮಹಾರಾಜಾ ಕಾಲೇಜಿನ ವಾತಾವರಣ ಹೇಗಿತ್ತು ?

37. ನಮ್ಮಲ್ಲಡಗಿರುವ ದುರ್ಬಲತೆಯ ನಾಶಕ್ಕಾಗಿ ವಿವೇಕಾನಂದರು ನೀಡಿದ ಸಂದೇಶವೇನು ?

38. ಯುದ್ಧಕ್ಕೆ ಕಾರಣಗಳು ಯಾವುವು ?

39. ಪಶುಲೋಮನು ತನ್ನ ಆತ್ಮಹತ್ಯಾ ಪ್ರಯತ್ನಕ್ಕೆ ಕೊಟ್ಟ ಕಾರಣಗಳೇನು ?

40. ಭಾರತಮಾತೆಯ ಮಕ್ಕಳಾದ ನಾವು ಹೇಗೆ ಬಾಳಬೇಕೆಂಬುದಕ್ಕೆ ಕವಿ ಕೃಷ್ಣಭಟ್ಟರು ಕೊಟ್ಟ ಸಂದೇಶವೇನು ?

41. ಪರಿಶುದ್ಧ ಮನಸ್ಸಿನ ಮಹತ್ವವನ್ನು ಕುರಿತು ಸೋಮನಾಥ ಕವಿ ಕೊಡುವ ಸಮರ್ಥನೆಗಳೇನು ?

42. ಸ್ಮೃತ, ವಚನ, ಭೋಗದ ವಿಚಾರದಲ್ಲಿ ಡಿ.ವಿ.ಜಿ.ಯವರ ಅಭಿಪ್ರಾಯಗಳೇನು ?

43. ಅರವಿಂದ ಮಾಲಗತ್ತಿಯವರು ತಿಳಿಸಿದ ಭಾರತ ಸಂಸ್ಕೃತಿಯ ಹಿರಿಮೆಯನ್ನು ಕುರಿತು ಬರೆಯಿರಿ.

44. ಕಿರಾತನು ಅರ್ಜುನನನ್ನು ಅಪಹಾಸ್ಯ ಮಾಡಿದುದು ಏಕೆ ?

45. ದುರ್ಯೋಧನ ಸರೋವರದಿಂದ ಮೇಲೆದ್ದು ಬಂದ ಪ್ರಸಂಗವನ್ನು ಕುರಿತು ಬರೆಯಿರಿ.

46. ನೃಪತುಂಗ ಕವಿ ಕನ್ನಡಿಗರ ಜಾಣ್ಮೆಯನ್ನು ಹೇಗೆ ಬಣ್ಣಿಸಿದ್ದಾನೆ ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. 'ಅವಳು ನನಗೆ ತಾಯಿ, ತಂದೆ, ದೇವರು ಎಲ್ಲಾ ಆಗಿದ್ದಳು'

48. 'ನಿಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನೀವೇ'

49. ‘ಅಪೂರ್ವ ಕುಶಲತೆಯನ್ನು ತೋರಿದ ಪ್ರತಿಭಾವಂತನೀತ.’

50. ‘ಪ್ರಜಾಮಾತೆ ನೀ ವಿಶ್ವಬಂಧು ನೀ’

51. 'ಮಾಧವನೀತನ್ ಪೆಜನಲ್ಲ'

ಈ ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : $2 \times 3 = 6$

52. ಎಂ.ಎಸ್. ಸುಂಕಾಪುರ

53. ಕುಮಾರವ್ಯಾಸ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಕೇಳು ಪರನಿಂದಕನೆ ನಿಂದ್ಯನು

ಹೇಳಲೇಂ ಪರಹಿತನೆ ವಂದ್ಯನು

ಹೇಳಿದಿಚ್ಛೆಗೆ ನಡೆವ ನೃಪನಿಂದಳಿವುದಾ ದೇಶ.

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3

ನಿನ್ನ ಕರುಣೆ ಕಡೆಗೋಲಿಟ್ಟು ಮಥಿಸುತಿಹೆ ಏಕೆ ?

56. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಕಟ್ಟುವುದು ಕಠಿಣ, ಕೆಡಿಸುವುದು ಸುಲಭ

— ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

— ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಪತಂಗದೊಳಡಗಿದ ____________________

____________________

____________________

____________________ತೇಜದಂತೆ.

ಅಥವಾ

ನಗು ಮನದಿ____________________

____________________

____________________

____________________ಮಂಕುತಿಮ್ಮ.

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡಿಯಲಿರುವ ಕರಕೀಯ ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ.

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಅಂಗುಲಿಮಾಲಾನ ಮನಸ್ಸು ಪರಿವರ್ತನೆಗೊಂಡ ರೀತಿಯನ್ನು ವಿವರಿಸಿ.
— ಮೊಲವು ಸಿಂಹವನ್ನು ಕೊಲ್ಲಲು ತೋರಿದ ಜಾಣ್ಮೆಯನ್ನು ಕುರಿತು ವಿವರಿಸಿ.
— ಗೌರಿ ಹಸು ತ್ಯಾಗಮಯಿ ಎಂಬುದನ್ನು ಕುರಿತು ಬರೆಯಿರಿ.

60.

61. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಮಾನವನ ಬದುಕಿನ ಸಾರ್ಥಕತೆಗಾಗಿ ಕನಕದಾಸರು ನೀಡಿದ ಸಂದೇಶಗಳನ್ನು ಕುರಿತು ವಿವರಿಸಿ.

— ಪಾಂಡವರು ಸರೋವರದ ಬಳಿಗೆ ಬರಲು ಕಾರಣವಾದ ಪ್ರಸಂಗವನ್ನು ವಿವರಿಸಿ.

62. — ಹೊಸ ಪರೀಕ್ಷಾ ಪದ್ಧತಿಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ವಿವರಿಸಿ, ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ. $1 \times 5 = 5$

ಅಥವಾ

— ನಿಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯ ಆರಂಭಿಸಿಕೊಡುವಂತೆ ವಿನಂತಿಸಿ, ನಿಮ್ಮ ಕ್ಷೇತ್ರದ ಶಾಸಕರಿಗೆ ಒಂದು ಮನವಿ ಪತ್ರ ಬರೆಯಿರಿ.

63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಪರಿಸರ ಮಾಲಿನ್ಯ

— ಜನಸಂಖ್ಯಾ ಸ್ಫೋಟ – ಕಾರಣಗಳು

— ಕಂಪ್ಯೂಟರ್ ಶಿಕ್ಷಣ ಅಗತ್ಯ